**KATK010007482014**

## <u>**3** ನೇ ಅಧಿಕ ಜಿಲ್ಲಾ ಮತ್ತ ಸತ್ರ ನ್ಯಾಯಾಲಯ, ತುಮಕೂರು.</u>

## <u>**Spl.C.25/2014**</u>

| | | |
|---|---|---|
| ಹೆಸರು | ಶಂಕರಲಿಂಗಯ್ಯ | ಪ್ರಾಸಾ.**7** |
| ತಂದೆಯ ಹೆಸರು | ಕುಮಾರಯ್ಯ | ಚಾಸಾ.**8** |
| ವಯಸ್ಸು | 52 ವರ್ಷ | |
| ವೃತ್ತಿ | ವ್ಯವಸಾಯ | |
| ವಾಸಸ್ಥಳ | ತೊರೆಮಾವಿನಹಳ್ಳಿ | |

ದಿನಾಂಕಃ **11-01-2022** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಾರ್ವಜನಿಕ ಅಭಿಯೋಜಕರವರಿಂದಃ</u>

ದಿನಾಂಕಃ 07-09-2013 ರಂದು ಪೊಲೀಸರು ಸುರಪ್ಪ ರವರ ಜಮೀನಿಗೆ ಬಂದಿದ್ದರು. ನಂತರ ಪೊಲೀಸರು ಮಹಜರ್ ಮಾಡಿದರು. ನಾನು ಮಹಜರ್ ಗೆ ಸಹಿಯನ್ನು ಮಾಡಿರುತ್ತೇನೆ. ಸಾಕ್ಷಿಯು ಮಹಜರ್ ನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-8 ಎಂದು ಗುರುತಿಲಾಗಿದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-8 (ಬಿ) ಎಂದು ಗುರುತಿಸಲಾಯಿತು. ಸದರಿ ಮಹಜರ್ ಗೆ ನಾನು, ಬಸವಪ್ರಭು ಮತ್ತು ಕಮಲಮ್ಮ ರವರುಗಳು ಸಹಿಯನ್ನು ಮಾಡಿರುತ್ತೇನೆ. ಪೊಲೀಸರು ನನ್ನ

ಸಮಕ್ಷಮ ಮು.ಮಾ -1 ಮತ್ತು 2 ನ್ನು ವಶಪಡಿಸಿಕೊಂಡರು. ಮಹಜರ್ ನಲ್ಲಿ ಬರೆದಿರುವ ವಿಷಯ ನನಗೆ ಗೊತ್ತು. ನ್ಯಾಯಾಲಯದ ಮುಂದಿರುವ ಚಪ್ಪಳಿ ಮತ್ತು ಎಡೆಮಟ್ಟೆ ಮು.ಮಾ -1 ಮತ್ತು 2 ನ್ನು ಈ ಹಿಂದೆ ನಾನು ನೋಡಿರುತ್ತೇನೆ.

ಪಾಟೀ ಸವಾಲು ಆರೋಪಿಗಳ ಪರ ಶ್ರೀ **BHD** ವಕೀಲರಿಂದ:

ನಮ್ಮ ಊರಿಗೂ ಘಟನಾ ಸ್ಥಳಕ್ಕೂ ಸುಮಾರು 20 ಕಿ.ಮೀ ಆಗುತ್ತದೆ. ಪೊಲೀಸರು ನನಗೆ ಯಾವುದೇ ನೋಟೀಸ್ ನ್ನು ನೀಡಿರಲಿಲ್ಲ. ಮಹಜರ್ ನಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ಪೊಲೀಸರು ಕೋರಿಕೆಯ ಮೇರೆಗೆ ನಾನು ಮಹಜರ್ ಗೆ ಸಹಿಯನ್ನು ಮಾಡಿರುತ್ತೇನೆ. ಕೃತ್ಯಕ್ಕೆ ಬಳಿಸಿದ ಮು.ಮಾ-1 ಮತ್ತು 2 ಎಲ್ಲಾ ಕಡೆ ದೊರೆಯುತ್ತದೆ ಎಂದರೆ ಸರಿ. ನ್ಯಾಯಾಲಯದ ಮುಂದಿರುವ ಚಪ್ಪಲಿ Hawai ಚಪ್ಪಲಿ ಅಲ್ಲ ಎಂದರೆ ಸರಿಯಲ್ಲ. ನನ್ನ ಮೇಲೆ ಈ ಪ್ರಕರಣಕ್ಕಿಂತ ಮೊದಲು ತುರುವೇಕೆರೆ ನ್ಯಾಯಾಲಯದಲ್ಲಿ ಅಪರಾಧಿತ ಪ್ರಕರಣವಿರುತ್ತದೆ ಎಂದರೆ ಸರಿ. 1 ನೇ ಆರೋಪಿ ನನಗೆ ತೊಂದರೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ಮು.ಮಾ -1 ಮತ್ತು 2 ನ್ನು ಪ್ರಕರಣಕ್ಕೋಸ್ಕರ ಸೃಷಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳ ವಿರುದ್ಧ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ,

**3** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.